# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 285
2. ಸದಸ್ಯರ ಹೆಸರು : ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 15.02.2023
4. ಉತ್ತರಿಸುವ ಸಚಿವರು : ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ದೇಶೀಯ (Domestic) ಮತ್ತು ಅಂತರಾಷ್ಟ್ರೀಯ (International) ವಿಮಾನ ನಿಲ್ದಾಣಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು). | ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಮಾನ ನಿಲ್ದಾಣಗಳ ವಿವರಗಳು ಈ ಕೆಳಕಂಡಂತಿದೆ;<br><br>ದೇಶೀಯ (Domestic) ವಿಮಾನ ನಿಲ್ದಾಣಗಳು:<br>1. ಮೈಸೂರು.<br>2. ಹುಬ್ಬಳ್ಳಿ.<br>3. ಬೆಳಗಾವಿ.<br>4. ಕಲಬುರಗಿ.<br>5. ಬೀದರ್ (ರಕ್ಷಣಾ) ವಿಮಾನ ನಿಲ್ದಾಣ (ಸಿವಿಲ್ ಎನ್‌ಕ್ಲೇವ್).<br>6. ವಿದ್ಯಾನಗರ (ಖಾಸಗಿ ವಿಮಾನ ನಿಲ್ದಾಣ).<br><br>ಅಂತರಾಷ್ಟ್ರೀಯ (International) ವಿಮಾನ ನಿಲ್ದಾಣಗಳು:<br>1. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು.<br>2. ಮಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಮಂಗಳೂರು. |
| (ಆ) | ಯಾವ ಮಾನದಂಡಗಳ ಮೇಲೆ ವಿಮಾನ ನಿಲ್ದಾಣ ಕಾರ್ಯಾರಂಭಕ್ಕೆ ಅನುಮತಿ ನೀಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು). | ಕೇಂದ್ರ ಸರ್ಕಾರದ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಅಭಿವೃದ್ಧಿ ಕುರಿತ ಮಾರ್ಗಸೂಚಿಗಳನ್ವಯ ಮತ್ತು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದಿಂದ ಸೈಟ್ ಕ್ಲೀಯರನ್ಸ್ ಅನುಮತಿಯನ್ನು ಪಡೆದ ನಂತರ ವಿಮಾನ ನಿಲ್ದಾಣ ಕಾರ್ಯಾರಂಭಕ್ಕೆ ಅನುಮತಿ ನೀಡಲಾಗುತ್ತದೆ. |
| (ಇ) | ರಾಜ್ಯದಲ್ಲಿ ಎಲ್ಲೆಲ್ಲಿ ವಿಮಾನ ನಿಲ್ದಾಣ ಕಾಮಗಾರಿಗಳು ಪ್ರಗತಿಯಲ್ಲಿದೆ ಯಾವಾಗ ಪೂರ್ಣಗೊಳಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ; | ಕಾಮಗಾರಿಗಳು ಪ್ರಗತಿಯಲ್ಲಿರುವ / ಪೂರ್ಣಗೊಳಿಸುವ ವಿವರಗಳು ಈ ಕೆಳಕಂಡಂತಿದೆ:<br><br>ವಿಮಾನ ನಿಲ್ದಾಣ — ಪೂರ್ಣಗೊಳಿಸುವ ಕಾಲಮಿತಿ<br>ಶಿವಮೊಗ್ಗ — ಫೆಬ್ರುವರಿ-2023<br>ವಿಜಯಪುರ — ಅಕ್ಟೋಬರ್-2023<br>ಹಾಸನ — ಫೆಬ್ರುವರಿ-2024 |

| | | |
|---|---|---|
| (ಈ) | ಕರ್ನಾಟಕ ರಾಜ್ಯದ ಮಧ್ಯ ಭಾಗದಲ್ಲಿರುವ ದಾವಣಗೆರೆ ನಗರದಲ್ಲಿ ವಿಮಾನ ನಿಲ್ದಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; | ಹೌದು, |
| ಉ) | ಬೆಂಗಳೂರು ನಗರ ಹೆಚ್.ಎ.ಎಲ್ ವಿಮಾನ ನಿಲ್ದಾಣದ ಸದ್ಯದ ಸ್ಥಿತಿಗತಿಗಳೇನು; ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಒತ್ತಡ ಕಡಿಮೆ ಮಾಡುವ ದೃಷ್ಟಿಯಿಂದ ಹೆಚ್.ಎ.ಎಲ್. ವಿಮಾನ ನಿಲ್ದಾಣವನ್ನು ದೇಶೀಯ ವಿಮಾನಗಳ ಸಂಚಾರಕ್ಕೆ ಬಳಸಿಕೊಳ್ಳುವ ಬಗ್ಗೆ ಸರ್ಕಾರದ ನಿರ್ಧಾರವೇನು? | ಹೆಚ್.ಎ.ಎಲ್ ವಿಮಾನ ನಿಲ್ದಾಣದ ರನ್‌ವೇ ಹೆಚ್.ಎ.ಎಲ್. ಒಡೆತನದಲ್ಲಿದೆ. ಟರ್ಮಿನಲ್ ಕಟ್ಟಡ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಒಡೆತನದಲ್ಲಿದ್ದು, ಬಿ.ಐ.ಎ.ಎಲ್ ಸಂಸ್ಥೆಯು ಕಾರ್ಯಾಚರಣೆಯ ಹಕ್ಕನ್ನು ಹೊಂದಿರುತ್ತದೆ.<br><br>ಹೆಚ್.ಎ.ಎಲ್ ವಿಮಾನ ನಿಲ್ದಾಣವನ್ನು ದೇಶೀಯ ವಿಮಾನಗಳ ಸಂಚಾರಕ್ಕೆ ಬಳಸಿಕೊಳ್ಳುವ ಬಗ್ಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ, ಹೆಚ್.ಎ.ಎಲ್ ಮತ್ತು ಬಿ.ಐ.ಎ.ಎಲ್ ಸಂಸ್ಥೆಗಳೊಂದಿಗೆ ಸಮಾಲೋಚಿಸಲಾಗುತ್ತಿದೆ. |

ಸಂಖ್ಯೆ:ಮೂಅಇ 25 ರಾಅವಿ 2023

(ವಿ. ಸೋಮಣ್ಣ)
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ,
ಸಚಿವರು